ರಾಜೀವ್‌ಗಾಂಧಿ ಆರೋಗ್ಯ ವಿಶ್ವವಿದ್ಯಾಲಯದ ಖರ್ಚು–ವೆಚ್ಚಗಳು

439(1046); ಡಾ॥ ಸುಧಾಕರ್ ಕೆ.

ಅ) ರಾಜೀವ್‌ಗಾಂಧಿ ಆರೋಗ್ಯ ವಿಶ್ವವಿದ್ಯಾಲಯದ ಖರ್ಚು–ವೆಚ್ಚಕ್ಕೆ ಮೀಸಲಿಟ್ಟಿರುವ ಅನುದಾನದ ಮೊತ್ತ ಎಷ್ಟು;

ಆ) ರಾಜೀವ್‌ಗಾಂಧಿ ಆರೋಗ್ಯ ವಿಶ್ವವಿದ್ಯಾಲಯದ ಮೂಲಕವೇ ರಾಜ್ಯದ ನಾನಾ ಜಿಲ್ಲೆಗಳಲ್ಲಿ ಪದವಿ ಹಾಗೂ ಸ್ನಾತಕೋತ್ತರ ಪದವಿ ಕಾಲೇಜು ಸ್ಥಾಪನೆ ಮಾಡುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ

ಇ) ರಾಮನಗರ ಜಿಲ್ಲೆಯಲ್ಲಿ ಕಳೆದ 15 ವರ್ಷದ ಹಿಂದೆ ನಿರ್ಮಿಸಲು ಉದ್ದೇಶಿಸಿದ್ದ ರಾಜೀವ್ ಗಾಂಧಿ ಆರೋಗ್ಯ ವಿ.ವಿ.ಯ ಪ್ರಸ್ತುತ ಯಾವ ಹಂತದಲ್ಲಿದೆ; ಸ್ಥಿತಿಗತಿ ಹೇಗಿದೆ (ವಾಸ್ತವ ಅಂಶದ ಸಂಪೂರ್ಣ ವಿವರವನ್ನು ನೀಡುವುದು);

ಈ) ಕಟ್ಟಡ ನಿರ್ಮಾಣ ಆಗಿದೆಯೇ; ಇದಕ್ಕೆ ಈಗಾಗಲೇ ಮಾಡಿರುವ ವೆಚ್ಚ ಎಷ್ಟು; ಅಲ್ಲಿಯೇ ವಿ.ವಿ. ಸ್ಥಾಪನೆ ಆಗಲಿದೆಯೇ ದಾಖಲೆ ಸಮೇತ ಸಂಪೂರ್ಣ ವಿವರ ನೀಡುವುದು;

ಉ) ಕಿದ್ವಾಯಿ ಸ್ಮಾರಕ ಆಸ್ಪತ್ರೆಯ ವ್ಯಾಪ್ತಿಯಲ್ಲಿ ಇಲಾಖೆಯ ಪಾತ್ರ ಏನಿದೆ; ಇಲ್ಲಿ ಸಾಕಷ್ಟು ದುರಾಡಳಿತ, ಅವ್ಯವಹಾರ ನಡೆದಿದೆ ಎನ್ನುವ ಆರೋಪವಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದರೆ ಕೈಗೊಂಡ ಕ್ರಮ ಏನು;

ಊ) ನಿಮ್ಹಾನ್ಸ್ ಆಸ್ಪತ್ರೆಯ ನಿರ್ವಹಣೆಯಲ್ಲಿ ಸರ್ಕಾರದ ಪಾಲು ಇದೆಯೇ; ಇದ್ದರೆ, ಅದರ ಬಗ್ಗೆ ಮಾಹಿತಿ ನೀಡುವುದು?

ಡಾ॥ ಶರಣ ಪ್ರಕಾಶ್ ಆರ್. ಪಾಟೀಲ್ (ವೈದ್ಯಕೀಯ ಶಿಕ್ಷಣ ರಾಜ್ಯ ಸಚಿವರು)

ಅ) ರಾಜೀವ್‌ಗಾಂಧಿ ಆರೋಗ್ಯ ವಿಶ್ವವಿದ್ಯಾಲಯದ ಖರ್ಚು–ವೆಚ್ಚಕ್ಕೆ ಮೀಸಲಿಟ್ಟಿರುವ ಅನುದಾನದ ಮೊತ್ತ ರೂ. 126.74 ಕೋಟಿಗಳು.

ಆ) ಅಂತಹ ಯಾವುದೇ ಪ್ರಸ್ತಾವನೆ ಸರ್ಕಾರದ ಹಂತದಲ್ಲಿ ಇರುವುದಿಲ್ಲ.

ಇ) ರಾಮನಗರ ಜಿಲ್ಲೆಯ ಅರ್ಚಕರಹಳ್ಳಿಯಲ್ಲಿ ರಾಜೀವ್‌ಗಾಂಧಿ ಆರೋಗ್ಯ ವಿಶ್ವವಿದ್ಯಾಲಯವನ್ನು ನಿರ್ಮಿಸಲು 2006–07 ನೇ ಸಾಲಿನಲ್ಲಿ ವಿದ್ಯಾಲಯ ಹಾಗೂ ಆರೋಗ್ಯನಗರ ನಿರ್ಮಾಣದ ಉದ್ದೇಶಕ್ಕಾಗಿ ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿಯ ವತಿಯಿಂದ 214 ಎಕರೆ 24 ಗುಂಟೆ ಜಮೀನನ್ನು ಸ್ವಾಧೀನ ಪಡಿಸಿಕೊಂಡಿದ್ದು, ಈ ಪೈಕಿ 1/3 ನೇ ಭಾಗವಾದ 71 ಎಕರೆ 15 ಗುಂಟೆ ಜಮೀನನ್ನು ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯಕ್ಕೆ ಸರ್ಕಾರದ ಆದೇಶ ಸಂಖ್ಯೆ: ಆಕುಕ 196 ಎಂ.ಪಿ.ಎಸ್ 2006 (ಭಾ), ದಿ: 18–08–2007 ರಲ್ಲಿ ಆದೇಶಿಸಿದೆ.

ಸದರಿ ಜಮೀನಿನ ಭೂಸ್ವಾಧೀನತೆಯನ್ನು ಪ್ರಶ್ನಿಸಿ ಕೆಲ ಜಮೀನಿನ ಭೂಮಾಲೀಕರು ಉಚ್ಚ ನ್ಯಾಯಾಲಯದ ಮೊರೆ ಹೋಗಿದ್ದು, ಎಲ್ಲಾ ಮೊಕದ್ದಮೆಗಳು ದಿನಾಂಕ: 30–07–2008 ರಲ್ಲಿ ವಜಾಗೊಂಡಿರುತ್ತವೆ. ಉಚ್ಚ ನ್ಯಾಯಾಲಯದ ಆದೇಶವನ್ನು ಪ್ರಶ್ನಿಸಿ ಭೂಮಾಲೀಕರು ದಿನಾಂಕ: 30–08–2008 ರಲ್ಲಿ ರಿಟ್ ಅಪೀಲನ್ನು ಸಲ್ಲಿಸಿದ್ದು, ಸದರಿ ರಿಟ್ ಅಪೀಲು ಸಹ ದಿ: 08–08–2011 ರಂದು ವಜಾಗೊಂಡಿರುತ್ತದೆ.

ನಂತರ ಉಚ್ಚ ನ್ಯಾಯಾಲಯದ ತೀರ್ಮಾನವನ್ನು ಭೂಮಾಲೀಕರುಗಳು ಮಾನ್ಯ ಸರ್ವೋಚ್ಚ ನ್ಯಾಯಾಲಯದಲ್ಲಿ ಎಸ್.ಎಲ್.ಪಿ. ಸಂಖ್ಯೆ: 27778–27814/2011 ಮೂಲಕ ಪ್ರಶ್ನಿಸಿದ್ದು, ಸರ್ವೋಚ್ಚ ನ್ಯಾಯಾಲಯವು ಯಥಾಸ್ಥಿತಿಯನ್ನು ಕಾಪಾಡುವಂತೆ ಮಧ್ಯಂತರ ಆದೇಶದಲ್ಲಿ ಆದೇಶಿಸಿರುತ್ತದೆ. ಸದರಿ ಪ್ರಕರಣದ ಮುಂದಿನ ವಿಚಾರಣೆಯು ದಿ: 10–02–2015 ಕ್ಕೆ ನಿಗದಿಯಾಗಿರುತ್ತದೆ.

ಉಳಿದಂತೆ 2/3ನೇ ಭಾಗವಾದ 145 ಎಕರೆ 9 ಗುಂಟೆ ಜಮೀನನ್ನು ನಿರ್ದೇಶಕರು, ವೈದ್ಯಕೀಯ ಶಿಕ್ಷಣ ಇವರಿಗೆ ಮಂಜೂರು ಮಾಡಲಾಗಿದೆ.

ಜಮೀನಿನ ಭೂಮಾಲೀಕರು ಮಾನ್ಯ ಸರ್ವೋಚ್ಚ ನ್ಯಾಯಾಲಯದ ಮೊರೆ ಹೋಗಿದ್ದು, ಸರ್ವೋಚ್ಚ ನ್ಯಾಯಾಲಯವು ಯಥಾ ಸ್ಥಿತಿಯನ್ನು ಕಾಪಾಡಲು ಸೂಚಿಸಿರುವುದರಿಂದ ಕಾಮಗಾರಿಯನ್ನು ಕೈಗೊಳ್ಳಲು ಸಾಧ್ಯವಾಗಿರುವುದಿಲ್ಲ.

ಈ) ರಾಮನಗರದಲ್ಲಿ ವಿಶ್ವವಿದ್ಯಾಲಯದ ಯಾವುದೇ ಕಟ್ಟಡ ನಿರ್ಮಾಣವಾಗಿರುವುದಿಲ್ಲ ಹಾಗೂ ವಿಶ್ವವಿದ್ಯಾಲಯದ ವತಿಯಿಂದ ಯಾವುದೇ ವೆಚ್ಚ ಭರಿಸಿರುವುದಿಲ್ಲ. ಮಾನ್ಯ ಸರ್ವೋಚ್ಚ ನ್ಯಾಯಾಲಯದ ಅಂತಿಮ ಆದೇಶದ ಮೇರೆಗೆ ನಿರ್ಧರಿಸಲಾಗುವುದು.

ಉ) ಕಿದ್ವಾಯಿ ಸ್ಮಾರಕ ಗಂಥಿ ಸಂಸ್ಥೆಯು ಸ್ವಾಯತ್ತ ಸಂಸ್ಥೆಯಾಗಿದ್ದು, ಈ ಸಂಸ್ಥೆಯು ಸರ್ಕಾರದಿಂದ ನೀಡಲ್ಪಡುವ ಸಹಾಯಾನುದಾನದಿಂದ ನಡೆಸಲ್ಪಡುತ್ತದೆ. ಉಳಿದಂತೆ ಸಂಸ್ಥೆಯ ಆಡಳಿತವನ್ನು ಸಂಸ್ಥೆಯ ಬೈಲಾದಲ್ಲಿನ ನಿಯಮಗಳನ್ವಯ ಹಾಗೂ ಆಡಳಿತ ಮಂಡಳಿಯ ನಿರ್ಣಯದನುಸಾರ ನಡೆಸಲಾಗುತ್ತಿದೆ.

ಸಂಸ್ಥೆಯಲ್ಲಿ ದುರಾಡಳಿತ, ಅವ್ಯವಹಾರ ನಡೆದಿದೆ ಎನ್ನಲಾದ ಆರೋಪಗಳ ಬಗ್ಗೆ ದೂರುಗಳು ಸರ್ಕಾರದಲ್ಲಿ ಸ್ವೀಕೃತಗೊಂಡಿದ್ದು, ಸದರಿ ದೂರುಗಳ ಬಗ್ಗೆ ಸೂಕ್ತ ತನಿಖೆ ನಡೆಸಿ, ತನಿಖಾ ವರದಿಯನ್ನು ಪರಿಶೀಲಿಸಿದ ಸರ್ಕಾರವು ಆರೋಪಗಳು ಮೇಲ್ನೋಟಕ್ಕೆ ಸಾಬೀತಾಗದ ಕಾರಣ ಅಂತಿಮವಾಗಿ ವಿಚಾರಣೆಯನ್ನು ಕೈಬಿಡಲಾಗಿರುತ್ತದೆ.

ಊ) ಹೌದು.

ರಾಜ್ಯ ಸರ್ಕಾರವು 2014–15 ನೇ ಸಾಲಿನಲ್ಲಿ ಯೋಜನೆಯಡಿಯಲ್ಲಿ ರೂ. 4.00 ಕೋಟಿಗಳನ್ನು ಹಾಗೂ ಯೋಜನೇತರ ಅಡಿಯಲ್ಲಿ ರೂ. 46.00 ಕೋಟಿಗಳನ್ನು ನಿಮಾನ್ಸ್ ಆಸ್ಪತ್ರೆಯ ನಿರ್ವಹಣೆಗೆ ಒದಗಿಸಲಾಗಿದೆ.